ಒಳಗಾಗಿದ್ದಳು. ಅಮ್ಮನಿಗೆ ನಾನೇ ಟ್ರೀಟ್‌ಮೆಂಟ್ ಕೊಡಲು ಪ್ರಾರಂಭಿಸಿದ್ದೆ. ಅವಳಲ್ಲಿ ಸ್ಕಿಜೋಫ್ರೇನಿಯಾ ಮತ್ತು ಬೈಪೋಲಾರ್ ಡಿಸಾರ್ಡರ್ ಎರಡರ ಲಕ್ಷಣಗಳೂ ದಟ್ಟವಾಗಿ ಕಾಣಿಸಿಕೊಂಡಿದ್ದವು. ನ್ಯೂರಾಲಜಿಯ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಪ್ರೊಫೆಸರ್ ದೀಪಿಕಾ ಜೋಷಿಯವರು ಅಮ್ಮನನ್ನು ಕೂಲಂಕಷವಾಗಿ ಪರೀಕ್ಷಿಸಿ 'ನೋಡು ಮನೋರಂಜನಿ, ನಿನ್ನ ಅಮ್ಮನನ್ನು ಇಲ್ಲಿಗೆ ಕರೆಸಿಕೊಂಡು ದೊಡ್ಡ ತಪ್ಪು ಮಾಡಿರುವೆ ನೀನು. ನಿನ್ನ ತಾಯಿಯ ಮೆದುಳಿನಲ್ಲಿ ವಿಚಿತ್ರವಾದ ಕೋಲಾಹಲ ಉಂಟಾಗಿದೆ. ಬರಿ ಹತಾಶೆಯೋ, ಇಲ್ಲ ಬರಿ ಸಂಭ್ರಮವೇ ಆಗಿರಲಿ, ಅದು ಯಾವ ಮಟ್ಟಕ್ಕಾದರೂ ಮೆದುಳಿನ ನರಮಂಡಲ ಅದನ್ನು ನಿಭಾಯಿಸಬಲ್ಲದು. ಆದರೆ ನಿನ್ನ ತಾಯಿಯ ಮನದಲ್ಲಿ ಉಂಟಾಗಿರುವ ಹತಾಶೆ ಮತ್ತು ಸಂಭ್ರಮಗಳ ನಡುವೆ ಉಂಟಾಗಿರುವ ಉತ್ಕಟತೆಯನ್ನು ತಡೆದುಕೊಳ್ಳುವಲ್ಲಿ ಅವಳ ಮೆದುಳಿನ ನರಮಂಡಲ ಸಂಪೂರ್ಣವಾಗಿ ಸೋತಿದೆ. ಇಂಥ ಲಕ್ಷಣ ಇಪ್ಪತ್ತು ಮೂವತ್ತು ಲಕ್ಷಕ್ಕೊಬ್ಬರಲ್ಲಿ ಕಾಣುತ್ತದೆ. ದೇಹ ಮತ್ತು ಮನಸ್ಸುಗಳ ನಡುವಿನ ನಿಯಂತ್ರಣಕ್ಕೆ ಬಾರದ ತಿಕ್ಕಾಟ ಕೂಡ ಇದಕ್ಕೆ ಕಾರಣ. ಕೋಲ್ಕತ್ತದ ಸೋನಾಗಾಚಿ, ಮುಂಬಯಿಯ ಕಾಮಾಟಿಪುರಗಳಲ್ಲಿ ವಾಸಿಸುವ ಹೆಣ್ಣುಮಕ್ಕಳಲ್ಲಿ ಇದು ಸಾಮಾನ್ಯವಾಗಿ ಕಂಡುಬಂದರೂ ಅವರಲ್ಲಿ ಅಷ್ಟೇ ವಿದ್‌ಸ್ಟ್ಯಾಂಡಿಂಗ್ ಪವರ್ ಅಪರಿಮಿತವಾಗಿ ಇರುತ್ತದೆ. ಇಲ್ಲದಿದ್ದಲ್ಲಿ ತಮ್ಮ ಜೀವಿತಾವಧಿಯಲ್ಲಿ ಸಾವಿರಾರು ಗಿರಾಕಿಗಳೊಂದಿಗೆ ಮಲಗಿಯೂ ಕೂಡ ಮುಖದ ತುಂಬಾ ನಗು ತುಂಬಿಕೊಂಡು ಅವರು ಜೀವಿಸುತ್ತಿರುವುದಾದರೂ ಹೇಗೆ? ನೀನು ಡಾಕ್ಟರ್ ಆಗಿ ಇಲ್ಲಿರುವುದನ್ನು ನೋಡಿ ನಿನ್ನ ತಾಯಿಗೆ ಸಂಭ್ರಮಿಸಲಿಕ್ಕೂ ಕೂಡ ಸಾಧ್ಯವಾಗದಂತಹ ರಾಸಾಯನಿಕಗಳು ಅವಳ ಬ್ರೈನಿನಲ್ಲಿ ಸ್ಖಲಿಸಿವೆ. ಹಾಗಾಗಿ ಅವಳನ್ನು ವಾಪಸ್ಸು ಮುಂಬಯಿಗೆ ಬಿಟ್ಟು ಬಂದು ಬಿಡು, ಸರಿ ಹೋದರೂ ಹೋಗಬಹುದು' ಎಂದು ನನ್ನ ಅಮ್ಮನ ತಲೆಯನ್ನು ನೇವರಿಸಿದ್ದರು.

ಅವರು ಹೇಳಿದಂತೆ ಒಂದು ವಾರ ಲೀವ್ ಹಾಕಿ ಅಮ್ಮನನ್ನು ನಾಗ್ಪಾಡಿಗೆ ಕರೆದುಕೊಂಡು ಹೋಗಿದ್ದೆ. ಹೋದ ಎರಡು ದಿನಕ್ಕೆ ಅಮ್ಮ ಅಚ್ಚರಿಯಾಗುವಂಥ ರೀತಿಯಲ್ಲಿ ಚೇತರಿಸಿಕೊಂಡಿದ್ದಳು. ವಾರಾಣಸಿಗೆ ಹಿಂತಿರುಗಿ ಹೋಗುವಂತೆ ನನಗೆ ಬಲವಂತಪಡಿಸಿದಳು. ನನಗೆ ಅಪಾರ ಖುಷಿಯಾಗಿತ್ತು. ನಾಲ್ಕು ದಿನಗಳ ಕಾಲ ಅಮ್ಮನೊಂದಿಗೆ ಮುಂಬಯಿ ಸುತ್ತಿ ವಾರಾಣಸಿಗೆ ಹಿಂತಿರುಗಿದ್ದೆ. ನಾನು **Neurology sleep physician** ಆಗಿದ್ದರಿಂದ ಅಮೆರಿಕದ ವಾಲ್ ಮಾರ್ಟ್ ಕಂಪನಿ ನನ್ನನ್ನು ತನ್ನ ಹ್ಯೂಮನ್ ರಿಸೋರ್ಸಸ್ ವಿಭಾಗಕ್ಕೆ ಹೆಡ್ ಆಗಿ ನೇಮಿಸಿಕೊಳ್ಳಲು ಮುಂದೆ ಬಂದಿತ್ತು. ಅಮೆರಿಕ ಮತ್ತು ಯೂರೋಪ್‌ಗಳಲ್ಲಿ ಸುತ್ತಾಡಿಕೊಂಡು ನಾನು ಕಂಪನಿಯ ಟಾಪ್ ಮಾರ್ಕೆಟಿಂಗ್ ಮತ್ತು ಪ್ರೊಡಕ್ಷನ್ ಅಧಿಕಾರಿಗಳಿಗೆ ಕೌನ್ಸಿಲಿಂಗ್ ನೀಡುವವರಿಗೇ ಕೌನ್ಸಿಲಿಂಗ್ ಕೊಡುವುದು ನನ್ನ ಕೆಲಸವಾಗಿತ್ತು. ಅಂದರೆ ಕಂಪನಿಯ ಮೈಂಡ್ ಟೀಮ್‌ನ ಹೆಡ್ ಆಗಿ ಕೆಲಸ ನಿರ್ವಹಿಸುವುದು. ಆ ಮೂಲಕ ಕಂಪನಿಯ ಪ್ರೊಡಕ್ಷನ್ ಮತ್ತು ಸೇಲ್ಸನ್ನು ಹಿಗ್ಗಿಸುವುದು. ಮುಂಬಯಿಯ ಕಾಮಾಟಿಪುರದಲ್ಲಿ ಹುಟ್ಟಿದ ನನಗೆ ಎಂಥಾ ಸ್ಥಾನ ಹುಡುಕಿಕೊಂಡು ಬಂದಿತ್ತು! ವರ್ಷಕ್ಕೆ ಎರಡು ಕೋಟಿ ವೇತನ! ನನಗೆ ನಿಜವಾಗಿಯೂ ಭಯವಾಗಿತ್ತು.

ಪ್ರೊಫೆಸರ್ ದೀಪಿಕಾ ಜೋಶಿಯವರು 'ನೋಡು ಮನೋರಂಜನಿ, ಈ ಕೆಲಸ ಅಂಥ ದೊಡ್ಡ ಚಾಲೆಂಜಿಂಗ್ ಕೆಲಸವೇನೂ ಅಲ್ಲ. ನೀನು ಅಪೂರ್ವ ಸುಂದರಿಯಿದ್ದೀಯ. ಜೊತೆಗೆ ಟ್ಯಾಲೆಂಟ್ ಕೂಡ ಕಡಿಮೆಯೇನಿಲ್ಲ. ಇವುಗಳ ಜೊತೆಗೆ ನಿನಗೆ ಬೇಕಾಗಿರುವ ಒಂದೇ ಒಂದು ಅಸ್ತ್ರವೆಂದರೆ ನಿನ್ನ ಮುಖದಲ್ಲಿ ಸದಾ ಒಂದು **unique** ಆದ **smile** ತುಂಬಿಕೊಂಡಿರುವುದು' ಎಂದು ನನ್ನಲ್ಲಿ ಆತ್ಮವಿಶ್ವಾಸ ಮತ್ತು ಧೈರ್ಯ ಎರಡನ್ನೂ ತುಂಬಿದ್ದರು. ನನ್ನನ್ನು ಏರ್‌ಪೋರ್ಟ್‌ನಲ್ಲಿ ಬೀಳ್ಕೊಡುತ್ತಾ ದೀಪಿಕಾ ಜೋಶಿಯವರು 'ಮನೋರಂಜನಿ, ನಿನ್ನ ಹೆಸರು ಮತ್ತು ಸೌಂದರ್ಯ ಎರಡರಲ್ಲೂ ಎಂಥದ್ದೋ ಮೋಹಕ ಶಕ್ತಿ ತುಂಬಿಕೊಂಡಿದೆ. ಅದು ನಿನ್ನನ್ನು ನಿರಂತರ ಯಶಸ್ಸಿನ ಕಡೆ ಕೊಂಡೊಯ್ಯುತ್ತದೆ. ವೈಯಕ್ತಿಕ ಕಷ್ಟನಷ್ಟಗಳ ಬಗ್ಗೆ ಯಾವತ್ತಿಗೂ ಸುಖಾಸುಮ್ಮನೆ ತಲೆಕೆಡಿಸಿಕೊಳ್ಳಬೇಡ. ಆಲ್ ದಿ ಬೆಸ್ಟ್' ಎಂದು ಮೆಲ್ಲಗೆ ಅಂಗೈ ಹಿಸುಕಿದ್ದರು. ಕಂಪನಿ ಸೇರಿ ಒಂದೇ ಒಂದು ತಿಂಗಳೊಳಗೆ ಕಂಪನಿಯಲ್ಲಿ ನನ್ನ ಹೆಸರು ಎತ್ತರಕ್ಕೆ ಏರಿತ್ತು. ನಾನು ಅಮೆರಿಕ ಸೇರಿದ ಒಂದೂವರೆ ತಿಂಗಳಿಗೆ ಅಮ್ಮ ಮನೆಯಲ್ಲಿ ನೇಣು ಬಿಗಿದುಕೊಂಡು ಸತ್ತು ಹೋಗಿದ್ದಳಂತೆ. ಮುಂಬಯಿ ಮಹಾನಗರ ಪಾಲಿಕೆಯವರು ಹೆಣವನ್ನು ಚಿತಾಗಾರಕ್ಕೆ ಒಯ್ದು ಸುಟ್ಟು ಹಾಕಿ ನನಗೆ ಫೋನ್ ಮಾಡಿದ್ದರು.

ಹದಿನೈದು ವರ್ಷಗಳ ಕಾಲ ಅಮ್ಮ, ಮುಂಬಯಿ, ನಾಗ್ಪಾಡ್ ಎಲ್ಲರನ್ನೂ, ಎಲ್ಲವನ್ನೂ ಮರೆತು ದುಡಿದೆ. ನಂತರ ಒಂದು ತೀರ್ಮಾನಕ್ಕೆ ಬಂದು ಮುಂಬಯಿಗೆ ಹಿಂತಿರುಗಿದೆ. ಅಮ್ಮನಂತಹ ಸಾವಿರಾರು ಮಂದಿ ಮಹಿಳೆಯರಿಗೆ ನಾನಿಂದು ಅವರ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಲಿಕ್ಕಾಗಿ ಕೌನ್ಸಿಲಿಂಗ್ ಮಾಡುತ್ತಿದ್ದೇನೆ. ಕಾಮಾಟಿಪುರ ಮತ್ತು ಧಾರಾವಿಗಳಲ್ಲಿ ನನ್ನವು ತಲಾ ಎರಡೆರಡು ಶಾಪುಗಳಿವೆ. ಇಲ್ಲಿ ಶ್ರೀಮಂತರಿಂದ ಹೆಚ್ಚಿನ ಫೀಜು ಪಡೆದು ಬಡವರಿಗೆ ಉಚಿತ ಸೇವೆಯನ್ನು ಕೊಡುತ್ತಿದ್ದೇನೆ. ಅಮೆರಿಕದ ಕಂಪನಿಗಳಲ್ಲಿ ನಾನಿಟ್ಟಿರುವ ಷೇರುಗಳಿಂದ ನನಗೆ ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಬರುತ್ತಿದೆ. ನೀನು ನನ್ನನ್ನು ಪ್ರಶ್ನಿಸಿದ್ದರಿಂದ ಇಷ್ಟೆಲ್ಲಾ ಹೇಳಬೇಕಾಯಿತು ಆಸ್ಕರ್ ವೈಲ್ಡ್. ನಿಮ್ಮಂಥ ಶ್ರೀಮಂತರು ನಿಮ್ಮದೇ ಆದ ಪರಿಧಿಯಲ್ಲಿ ಬದುಕುವುದನ್ನು ಬಿಟ್ಟು ನಿಮ್ಮ ಪರಿಧಿಯಿಂದ ಆಚೆಗೆ ಚಾಚಿಕೊಂಡಿರುವ ಅಗಾಧ ಜಗತ್ತಿನ ಒಳಗೂ ಪ್ರವೇಶಿಸಿ ನೋಡಬೇಕು' – ಮನೋರಂಜನಿಯವರ ಮಾತುಗಳಿಂದ ತಾತ, ಮೊಮ್ಮಗ ಇಬ್ಬರೂ ವಿಸ್ಮಯದಲ್ಲಿ ಮುಳುಗಿಬಿಟ್ಟಿದ್ದರು.

ಗುನ್ನಾಲಾಲ್ ಮುಂಬಯಿಗೆ ಬಂದ ಪ್ರಾರಂಭದಲ್ಲಿ ಧಾರಾವಿಯಲ್ಲಿ ಮೂರು ವರ್ಷಗಳ ಕಾಲ ನೆಲೆಸಿದ ಸಂಗತಿಯನ್ನು ಅಪ್ಪಿತಪ್ಪಿಯೂ ಆಸ್ಕರ್ ವೈಲ್ಡನ ಮುಂದೆ ಡಾಕ್ಟರ್ ಮನೋರಂಜನಿ ಪ್ರಸ್ತಾಪಿಸಲಿಲ್ಲ. ಗುನ್ನಾಲಾಲ್ ತನ್ನ ಪೂರ್ವ ಇತಿಹಾಸವನ್ನು ಕುಟುಂಬದ ಯಾರ ಬಳಿಯೂ ಪ್ರಸ್ತಾಪಿಸಿಲ್ಲ ಎಂಬ ಸಂಗತಿಯನ್ನು ಆಕೆ ಹರ್ಷವರ್ಧನ್ ಶಿರೋಡ್ಕರನ ಮೂಲಕ ತಿಳಿದವಳಾಗಿದ್ದಳು. ಅದೂ ಅಲ್ಲದೆ ಲೆಕ್ಕವಿಲ್ಲದಷ್ಟು ಶ್ರೀಮಂತರ ಕೌನ್ಸಿಲಿಂಗ್ ಮಾಡಿದ್ದ ಡಾಕ್ಟರ್ ಮನೋರಂಜನಿಗೆ ಇಂಥ ಸೂಕ್ಷ್ಮಗಳ ಅರಿವು ಸದಾ ಜಾಗೃತವಾಗಿರುತ್ತಿತ್ತು. ತನ್ನ ಮೊಮ್ಮಗನ ಮುಂದೆ ಮನೋರಂಜನಿಯವರು ಧಾರಾವಿಯ ಸಂಬಂಧವನ್ನು ಪ್ರಸ್ತಾಪಿಸದಿದ್ದಕ್ಕಾಗಿ ಗುನ್ನಾಲಾಲ್ ಪ್ರಸನ್ನಚಿತ್ತನಾಗಿ ಬ್ಯಾಗಿನಿಂದ ಚೆಕ್ ಬುಕ್ ತೆಗೆದು ಹತ್ತು ಲಕ್ಷ ರೂಪಾಯಿಯ ಚೆಕ್ಕನ್ನು ಮನೋರಂಜನಿಯ ಕೈಗಿಟ್ಟು – 'ಇದು ನಿಮ್ಮ ನಿಸ್ಪೃಹ ಸೇವೆಗಾಗಿ ನನ್ನ ಅಲ್ಪ ಕಾಣಿಕೆ' ಎಂದಿದ್ದ. ಮನೋರಂಜನಿ ಚೆಕ್ಕನ್ನು ಡ್ರಾಯರಿಗೆ ಹಾಕಿ ಇಂಟರ್ ಕಾಂನಲ್ಲಿ ತನ್ನ ಸಹಾಯಕಿಯೊಂದಿಗೆ ಏನನ್ನೋ ಸಣ್ಣದಾಗಿ ಮಾತನಾಡಿದ್ದರು. ಎರಡನೇ ನಿಮಿಷದಲ್ಲಿ ಸಹಾಯಕಿ ಒಂದು ದೊಡ್ಡ ಗ್ಲಾಸ್ ನೀರನ್ನು ತಂದು ಟೇಬಲ್ ಮೇಲೆ ಇಟ್ಟಿದ್ದಳು. ಅದರಲ್ಲಿ ಸುಮಾರಾದ ಮಂದ ಬಿಳುಪಿನ ಮುದ್ದೆಯಂತಹುದೇನೋ ತೇಲುತ್ತಿತ್ತು. ತೊಂಬತ್ತು ಪರ್ಸೆಂಟ್ ನೀರಿನಲ್ಲಿ ಮುಳುಗಿ ಸ್ವಲ್ಪವೇ ಸ್ವಲ್ಪ ಭಾಗ ನೀರಿನ ಹೊರಮೈನಲ್ಲಿ ಕಾಣಿಸುತ್ತಿತ್ತು. ಡಾಕ್ಟರ್ ಮನೋರಂಜನಿ ಆಸ್ಕರ್ ವೈಲ್ಡನನ್ನು ಕುರಿತು 'ವೈಲ್ಡ್ ಇದರಲ್ಲಿ ಕಾಣುತ್ತಿರುವುದೇನು ಹೇಳ್ತೀಯ' ಎಂದು ಮುಖದಲ್ಲಿ ನಗು ತೇಲಿಸಿ ಕೇಳಿದ್ದರು. ಆಸ್ಕರ್ ವೈಲ್ಡ್ ಏನಿರಬಹುದೆಂದು ಯೋಚಿಸುತ್ತಿರುವಾಗ ಗುನ್ನಾಲಾಲ್ ಖುಷಿಯಿಂದ 'ನೀರಿನಲ್ಲಿ ತೇಲುತ್ತಿರುವ ಬೆಣ್ಣೆಯ ಮುದ್ದೆ' ಎಂದು ಉಚ್ಚರಿಸಿದ್ದ. ಬೆಣ್ಣೆಯನ್ನು ಗ್ಲಾಸಿನ ನೀರಿನಲ್ಲಿ ಆಸ್ಕರ್ ವೈಲ್ಡ್ ಕಂಡವನಲ್ಲ. 'ನಮ್ಮ ಮೆದುಳು ಕೂಡ ಈ ಗ್ಲಾಸಿನಲ್ಲಿರುವ ಬೆಣ್ಣೆಯಂತೆ' ಎಂದ ಡಾಕ್ಟರ್ ಮನೋರಂಜನಿಯ ಮುಖವನ್ನು ಅಚ್ಚರಿಯಿಂದ ನೋಡಿದ್ದ ಆಸ್ಕರ್ ವೈಲ್ಡ್. ಗುನ್ನಾಲಾಲನಿಗೂ ಅದು ಹೇಗೆಂದು ಅರ್ಥವಾಗಿರಲಿಲ್ಲ.

'ನೀರಿನಲ್ಲಿ ಬೆಣ್ಣೆಯ ಮುದ್ದೆ ತೇಲುತ್ತಿರುವಂತೆ ಕಂಡರೂ ತೊಂಬತ್ತು ಪರ್ಸೆಂಟ್ ಮುಳುಗಿದೆ. ಇನ್ನು ಹತ್ತು ಪರ್ಸೆಂಟಿನಷ್ಟು ಬೆಣ್ಣೆ ಮಾತ್ರ ನೀರಿನ ಮೇಲೆ ಕಾಣುತ್ತಿದೆ. ಮನುಷ್ಯನ ಮೆದುಳು ಕೂಡ ಹೀಗೆ ಕೇವಲ ಹತ್ತು ಪರ್ಸೆಂಟ್ **conscious state**ನಲ್ಲಿ ಇದ್ದರೆ, ತೊಂಬತ್ತು ಪರ್ಸೆಂಟ್ **sub conscious state**ನಲ್ಲಿ ಬಿದ್ದುಕೊಂಡಿರುತ್ತದೆ. ಮನುಷ್ಯನ ಬಹುತೇಕ ಚಟುವಟಿಕೆಗಳು ಜಾಗೃತ ಮೆದುಳಿನಲ್ಲಿ ನಡೆಯುತ್ತಿರುತ್ತವೆ. **sub conscious** ಮೈಂಡ್ ಕೂಡಾ ಮನುಷ್ಯನ ಚಟುವಟಿಕೆಗಳನ್ನು ಅವನಿಗೆ ಅರಿಯದಂತೆಯೇ ನಿಯಂತ್ರಿಸುತ್ತಿರುತ್ತದೆ. ಮನುಷ್ಯನ ಪ್ರಜ್ಞಾವಸ್ಥೆಯಲ್ಲಿನ ತೃಪ್ತಿ, ಅತೃಪ್ತಿ, ಸಂಕಟ, ಸಂಭ್ರಮ, ಸ್ವಾರ್ಥ, ದ್ವೇಷ ಮುಂತಾದ **natural instinct**ಗಳು ಅನೇಕ ಬಾರಿ **sub conscious** ಮೈಂಡ್‌ನಲ್ಲಿ ಕನಸುಗಳಾಗಿ ಜೀವ